# ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ

ಕುಲಸಚಿವರ ಕಛೇರಿ, ಕೃ.ತೋ.ವಿ.ವಿ., ಶಿವಮೊಗ್ಗ

ದೂರವಾಣಿ: 08182- 277295/267051/267011 ಇ-ಮೇಲ್: registrarshimoga@gmail.com


ಸಂ: ಕುಸ/ಕೃತೋವಿವಿಶಿ/ಸ್ನಾಪ್ರಪ-19/48 /2019-20 ದಿನಾಂಕ: 03-04-2019

## ಕೃಷಿ ಕೋಟಾದಡಿಯಲ್ಲಿ ಪ್ರವೇಶ ಪ್ರಕ್ರಿಯೆಯ ಪ್ರಕಟಣೆ - 2019

ಕೃಷಿ ಮತ್ತು ಕೃಷಿ ಸಂಬಂಧಿತ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಪದವಿ ಕಾರ್ಯಕ್ರಮಗಳಿಗೆ ಕೃಷಿಕರ ಕೋಟಾದ ಸೀಟುಗಳಿಗೆ ನಡೆಸುವ 2019 ರ ಪ್ರಾಯೋಗಿಕ ಪರೀಕ್ಷೆಗೆ ಕೃಷಿ ಮಹಾವಿದ್ಯಾಲಯ, ಶಿವಮೊಗ್ಗ (ಕೃ.ತೋ.ವಿ.ವಿ., ಶಿವಮೊಗ್ಗ) ಕೇಂದ್ರವನ್ನಾಗಿ ಆಯ್ಕೆಮಾಡಿಕೊಂಡಿರುವ ಅಭ್ಯರ್ಥಿಗಳು ಪ್ರಾಯೋಗಿಕ ಪರೀಕ್ಷೆಯ ಮೂಲ ದಾಖಲಾತಿಗಳನ್ನು ದಿನಾಂಕ 13-05-2019 ರಿಂದ 15-05-2019 ರವರೆಗೆ ಬೆಳಿಗ್ಗೆ 9.00 ರಿಂದ ಸಂಜೆ 4.00 ರವರೆಗೆ (ರಜಾ ದಿನಗಳನ್ನು ಹೊರತುಪಡಿಸಿ) ಶಿವಮೊಗ್ಗ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯ ಅಭ್ಯರ್ಥಿಗಳು ಕೃಷಿ ಮಹಾವಿದ್ಯಾಲಯ, ನವಿಲೆ, ಸವಳಂಗ ರಸ್ತೆ, ಶಿವಮೊಗ್ಗ ಕೇಂದ್ರದಲ್ಲಿ ಪರಿಶೀಲನೆ ಮಾಡಿಸುವುದು ಕಡ್ಡಾಯವೆಂದು ಈ ಮೂಲಕ ತಿಳಿಸಲಾಗಿದೆ.

1. ಅಭ್ಯರ್ಥಿಗಳು ಅವರುಗಳ ಸ್ವಂತ ಜಿಲ್ಲೆಯ (ಕಂದಾಯ ಇಲಾಖೆ ದಾಖಲಾತಿಗಳ ಪ್ರಕಾರ ಕೃಷಿ ಭೂಮಿ ಹೊಂದಿದ ಜಿಲ್ಲೆ) ಯಾವ ಪ್ರಾಯೋಗಿಕ ಪರೀಕ್ಷಾ ಕೇಂದ್ರಕ್ಕೆ ಬರುವುದೊ, ಆಯಾ ಕೇಂದ್ರದಲ್ಲಿಯೇ ದಾಖಲಾತಿಗಳನ್ನು ಪರಿಶೀಲಿಸಿಕೊಳ್ಳಬೇಕು. ಬೇರೆ ಜಿಲ್ಲೆಯ ವಿದ್ಯಾರ್ಥಿಗಳ ದಾಖಲಾತಿ ಪರಿಶೀಲನೆಯನ್ನು ಪರಿಗಣಿಸಲಾಗುವುದಿಲ್ಲ.
2. **ತಮ್ಮ ಸ್ವಂತ ಜಿಲ್ಲೆಯು ಬರುವ ಕೇಂದ್ರವನ್ನು ಬಿಟ್ಟು ಬೇರೆ ಕೇಂದ್ರವನ್ನು ಆರಿಸಿಕೊಂಡಿರುವ ವಿದ್ಯಾರ್ಥಿಗಳು ಪರಿಶೀಲನೆಗೆ ಬಂದಾಗ ಅವರ ಜಿಲ್ಲೆಯು ಬರುವ ಕೇಂದ್ರಕ್ಕೆ ಕಳುಹಿಸಿಕೊಡಲಾಗುವುದು.**
3. **ಯಾವ ಕೇಂದ್ರದಲ್ಲಿ ದಾಖಲಾತಿಗಳ ಪರಿಶೀಲಿಸಲಾಗುತ್ತದೆಯೋ ಆ ಕೇಂದ್ರದಲ್ಲಿಯೇ ಪ್ರಾಯೋಗಿಕ ಪರೀಕ್ಷೆಯನ್ನು ಕಡ್ಡಾಯವಾಗಿ ಬರೆಯಬೇಕು.**
4. **ದಿನಾಂಕ: 13-05-2019 ರಿಂದ 15-05-2019ರ ಒಳಗೆ ದಾಖಲಾತಿಗಳನ್ನು ಪರಿಶೀಲಿಸಿಕೊಳ್ಳದ ಅಭ್ಯರ್ಥಿಗಳಿಗೆ 18-05-2019 ರಂದು ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗಲು ಅವಕಾಶವಿರುವುದಿಲ್ಲ.**
5. ಅಭ್ಯರ್ಥಿಗಳ ತಂದೆ ತಾಯಿ/ಪೋಷಕರು ಇವರುಗಳಲ್ಲಿ ಯಾರಾದರು ಬಂದು ಮೂಲದಾಖಲಾತಿಗಳನ್ನು ಪರಿಶೀಲಿಸಿಕೊಳ್ಳಬಹುದು.
6. **ಪರಿಶೀಲನೆಗೆ ತರಬೇಕಾದ ಮೂಲದಾಖಲಾತಿಗಳು**
   - ಅ. CET ಪರೀಕ್ಷಾ ಪ್ರವೇಶ ಪತ್ರ (Admission Ticket)
   - ಆ. ವ್ಯವಸಾಯಗಾರರ ಪ್ರಮಾಣ ಪತ್ರ – 3 (ಅವಿಭಾಜ್ಯ ಕುಟುಂಬವಾದಲ್ಲಿ ಕಂದಾಯ ಇಲಾಖೆಯಿಂದ ಒದಗಿಸುವ ವಂಶವೃಕ್ಷ ಪ್ರಮಾಣ ಪತ್ರ)
   - ಇ. ವ್ಯವಸಾಯದ/ಕೃಷಿ ಆದಾಯದ ಪ್ರಮಾಣ ಪತ್ರ
   - ಈ. ವೇತನ ದೃಢೀಕರಣ ಪ್ರಮಾಣ ಪತ್ರ – 4 (ಜೊತೆಗೆ ನೌಕರಿಯಿದ್ದಲ್ಲಿ)
   - ಉ. ಖಾಸಗಿ ವೃತ್ತಿಯಿಂದ ಆದಾಯದ ಪತ್ರ – 5 (ಜೊತೆಗೆ ಸ್ವಂತ ವ್ಯವಹಾರವಿದ್ದಲ್ಲಿ)
   - ಊ. ಅಫಿಡವಿಟ್ (ಕೇವಲ 8ಇ & 8ಈ ಒಟ್ಟು ಆದಾಯಕ್ಕೆ ಸಂಬಂಧಿಸಿದಂತೆ ಮಾತ್ರ, ಮೊದಲನೇ ಪಾರ್ಟಿಯಾಗಿ ಅಭ್ಯರ್ಥಿಯು ಮತ್ತು ಎರಡನೇ ಪಾರ್ಟಿಯಾಗಿ ಸಂಬಂಧಪಟ್ಟ ವಿಶ್ವವಿದ್ಯಾಲಯ).
   - ಋ. ಡಿಮಾಂಡ್ ಡ್ರಾಫ್ಟ್‌ನ್ನು ಯಾವುದೇ ರಾಷ್ಟ್ರೀಕೃತ ಬ್ಯಾಂಕ್ ನಿಂದ **"The Comptroller, UAHS, Shivamogga"** ಇವರ ಹೆಸರಿನಲ್ಲಿ ತೆಗೆಯಬೇಕು ರೂ. 500/- ಸಾಮಾನ್ಯ ಮತ್ತು ರೂ. 250/- ಪ್ರ.ಜಾ/ಪ.ಪ/ಪ್ರವರ್ಗ-1 ರ ಅಭ್ಯರ್ಥಿಗಳಿಗೆ (ಜಾತಿ ಪ್ರಮಾಣ ಪತ್ರವನ್ನು ಡಿಡಿ ಜೊತೆ ಕಡ್ಡಾಯವಾಗಿ ಲಗತ್ತಿಸತಕ್ಕದ್ದು). ಡಿಮಾಂಡ್ ಡ್ರಾಫ್ಟ್ ದಿನಾಂಕ: 01-05-2019 ರಿಂದ 15-05-2019ರ ಒಳಗೆ ಇರಬೇಕು.

**ಸೂಚನೆ:** 1. ಅಭ್ಯರ್ಥಿಗಳಿಗೆ ಕಂದಾಯ ಇಲಾಖೆಯು ನೀಡುವ ಸ್ವೀಕೃತಿ ಪತ್ರ (Acknowledgement) ಅಥವಾ ರಶೀದಿ (Receipt) ಗಳ ಆಧಾರದ ಮೇಲೆ ದಾಖಲಾತಿಗಳ ಪರಿಶೀಲನೆ ಮಾಡಲಾಗುವುದಿಲ್ಲ.

2. **ಮೇ 18, 2019** ರಂದು ಬೆಳಿಗ್ಗೆ 9.00 ಗಂಟೆಗೆ ಪ್ರಾಯೋಗಿಕ ಪರೀಕ್ಷೆಯನ್ನು ಕೃಷಿ ಮಹಾವಿದ್ಯಾಲಯ, ಸವಳಂಗ ರಸ್ತೆ, ನವಿಲೆ, ಕೃ.ತೋ.ವಿ.ವಿ., ಶಿವಮೊಗ್ಗದಲ್ಲಿ ನಡೆಸಲಾಗುವುದು. ಈ ಪ್ರಾಯೋಗಿಕ ಪರೀಕ್ಷೆಗೆ ಅಭ್ಯರ್ಥಿಗಳು ಕಡ್ಡಾಯವಾಗಿ ಕಪ್ಪು ಬಾಲ್ ಪೆನ್ (Black Ball Pen) ನಲ್ಲಿ ಉತ್ತರಿಸಬೇಕಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್ ವೀಕ್ಷಿಸುವುದು **www.uahs.edu.in.**

ಆದೇಶದ ಮೇರೆಗೆ
ಸಹಿ/-
ಕುಲಸಚಿವರು,
ಕೃ.ತೋ.ವಿ.ವಿ.ಶಿವಮೊಗ್ಗ